ಗದ್ಯ ಭಾಗ

## ಮುಟ್ಟಿಸಿಕೊಂಡವನು

– ಪಿ. ಲಂಕೇಶ್

ಅ. ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:

೧. ಅಪರೇಷನ್ ಆಗಬೇಕು, ಪರವಾಗಿಲ್ಲವಾ?

* ಈ ಮಾತನ್ನು ಪಿ ಲಂಕೇಶ್ ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಕತೆಯಿಂದ ಆಯ್ದುಕೊಳ್ಳಲಾಗಿದೆ.

* ಈ ಮಾತನ್ನು ಡಾ. ತಿಮ್ಮಪ್ಪನವರು ಬಸಲಿಂಗನಿಗೆ ಹೇಳುತ್ತಾರೆ.

* ರೈತ ಬಸಲಿಂಗನಿಗೆ ತನ್ನನ್ನು ಕಾಡುವ ಹಲವು ಸಮಸ್ಯೆಗಳ ನಡುವೆ ಎಡಗಣ್ಣಿನ ನೋವು ಹಾಗು ಅದರ ದೃಷ್ಟಿ ಕುಂದುತ್ತಿರುವುದು ಇನ್ನಿಲ್ಲದಂತೆ ಬಾಧಿಸಿತು. ಚಿಕಿತ್ಸೆಗೆಂದು ತನ್ನ ಎಂದಿನ ವೈದ್ಯರ ಬಳಿ ಹೋದರೂ ಪ್ರಯೋಜನವಾಗದಿದ್ದಾಗ ಆತನಿಗೆ ಸರ್ಕಾರಿ ಆಸ್ಪತ್ರೆಯ ಡಾ. ತಿಮ್ಮಪ್ಪನವರ ಬಳಿಗೆ ಹೋಗಲು ಕೆಲವರು ಸಲಹೆ ನೀಡಿದರು. ಅದರಂತೆ ಡಾ. ತಿಮ್ಮಪ್ಪನವರ ಬಳಿಗೆ ಬಂದ ಬಸಲಿಂಗ ಅವರಲ್ಲಿ ಕಣ್ಣಿನ ಸಮಸ್ಯೆಯೊಂದಿಗೆ ತನ್ನ ಇತರ ಸಮಸ್ಯೆಗಳ ಬಗೆಗೂ ಹೇಳಿ ಕೊಳ್ಳುತ್ತಾನೆ. ಆಗ ಡಾ. ತಿಮ್ಮಪ್ಪನವರು ಸೂಟಿಯಾದ ತಮ್ಮ ಬೆರಳುಗಳಿಂದ ಆತನ ಕಣ್ಣನ್ನು ಪರೀಕ್ಷಿಸುತ್ತಾ ನಿನ್ನ ಕಣ್ಣು ಸರಿಹೋಗುತ್ತೆ ಎಂದು ಹೇಳುತ್ತಾ ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ: ಬಸಲಿಂಗನಿಗೆ ವಿಶ್ವಾಸವನ್ನು ತುಂಬುವ ಮೂಲಕ ಡಾ. ತಿಮ್ಮಪ್ಪನವರು ಅಪರೇಷನ್‌ಗೆ ಒಪ್ಪಿಗೆಯನ್ನು ಪಡೆಯುವುದನ್ನು ಇಲ್ಲಿ ಗಮನಿಸಬಹುದು.

೨. ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ.

* ಈ ಮಾತನ್ನು ಪಿ ಲಂಕೇಶ್‌ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಕತೆಯಿಂದ ಆಯ್ದುಕೊಳ್ಳಲಾಗಿದೆ.

* ಈ ಮಾತನ್ನು ಡಾ. ತಿಮ್ಮಪ್ಪನವರು ಬಸಲಿಂಗನಿಗೆ ಹೇಳುತ್ತಾರೆ.

* ರೈತ ಬಸಲಿಂಗ ತನ್ನ ಎಡಗಣ್ಣಿನ ಸಮಸ್ಯೆಗೆ ತನ್ನ ಎಂದಿನ ವೈದ್ಯರ ಬಳಿ ಸೂಕ್ತ ಚಿಕಿತ್ಸೆ ದೊರಿಯದಿದ್ದಾಗ ಆತ ಸರ್ಕಾರಿ ಆಸ್ಪತ್ರೆಯ ಡಾ.ತಿಮ್ಮಪ್ಪನವರ ಬಳಿ ಹೋಗುತ್ತಾನೆ. ಡಾ. ತಿಮ್ಮಪ್ಪನವರು ಸೂಟಿಯಾದ ತಮ್ಮಬೆರಳುಗಳಿಂದ ಆತನ ಕಣ್ಣನ್ನು ಪರೀಕ್ಷಿಸಿ, ಆಪರೇಷನ್ ನಿಂದ ಕಣ್ಣನ್ನು ಗುಣಪಡಿಸಬಹುದೆಂಬ ಸಲಹೆ

ಕೊಡುತ್ತಾರೆ, ಅದರಂತೆ ಬಸಲಿಂಗನ ಒಪ್ಪಿಗೆ ಪಡೆದು ಆಪರೇಷನ್ ನಡೆಸಿಇದು ತುಂಬಾ ಸೂಕ್ಷ್ಮವಾದ ಶಸ್ತ್ರಚಿಕಿತ್ಸೆಯಾಗಿದ್ದು, ತಲೆಗೆ ನೀರು ಸೋಂಕಿಸಬಾರದು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ: ತಮ್ಮ ರೋಗಿಯೊಬ್ಬನ ಆರೋಗ್ಯದ ದೃಷ್ಟಿಯಿಂದ ಡಾ. ತಿಮ್ಮಪ್ಪನವರು ಪ್ರೀತಿಯಿಂದ ರೋಗಿಗೆ ನೀಡುತ್ತಿರುವ ಎಚ್ಚರಿಕೆ ಮಾತಿದು.

೩. ಬಸಲಿಂಗಪ್ಪ, ನೀನು ತುಂಬಾ ಒಳ್ಳೆಯವನು.

* ಈ ಮಾತನ್ನು ಪಿ. ಲಂಕೇಶ್ ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಕತೆಯಿಂದ ಆಯ್ದುಕೊಳ್ಳಲಾಗಿದೆ.

* ಈ ಮಾತನ್ನು ಡಾ. ತಿಮ್ಮಪ್ಪನವರು ಬಸಲಿಂಗನಿಗೆ ಹೇಳುತ್ತಾರೆ.

* ಬಸಲಿಂಗ ತನ್ನ ಎಡಗಣ್ಣಿನ ಸಮಸ್ಯೆ ಉಲ್ಬಣವಾದಾಗ ಡಾ. ತಿಮ್ಮಪ್ಪನವರ ಬಳಿ ಆಪರೇಷನ್ ಮಾಡಿಸಿಕೊಳ್ಳುತ್ತಾನೆ.ಆದರೆ ಡಾ. ತಿಮ್ಮಪ್ಪನವರು ಹೊಲೆಯರೆಂದು ತಿಳಿದು ಸೂತಕವನ್ನು ಹೋಗಲಾಡಿಸಿಕೊಳ್ಳುವ ದೃಷ್ಟಿಯಿಂದ ಅವರ ಎಚ್ಚರಿಕೆಯನ್ನು ಧಿಕ್ಕರಿಸಿ ಸ್ನಾನ ಮಾಡುತ್ತಾನೆ. ಆದರೆ ಇದರಿಂದ ಮತ್ತೆ ಕಣ್ಣು ನೋವು ಹೆಚ್ಚಾಗಿ ಬೇರೆ ವೈದ್ಯರಿಂದ ಸೂಕ್ತ ಚಿಕಿತ್ಸೆ ದೊರೆಯದೆ ಬೇರೆ ದಾರಿಯಿಲ್ಲದೆ ಡಾ. ತಿಮ್ಮಪ್ಪನವರ ಬಳಿಗೆ ಬಂದು ತಾನು ತಲೆಗೆ ನೀರು ಸೋಂಕಿಸಿಯೇ ಇಲ್ಲವೆಂದು ಸುಳ್ಳು ಹೇಳುತ್ತಾನೆ. ಆಗ ಆತ ನಡುಗುತ್ತಿರುವುದನ್ನು ನೋಡಿ ಡಾ. ತಿಮ್ಮಪ್ಪನವರು ಈ ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ: ಡಾ. ತಿಮ್ಮಪ್ಪನವರಲ್ಲಿ ಒಬ್ಬ ವೈದ್ಯರಲ್ಲಿರಬೇಕಾದ ಒಳ್ಳೆತನವನ್ನು ಈ ಮಾತಿನ ಮೂಲಕ ಗಮನಿಸಬಹುದು.

೪. ಅವರು ನನ್ನಷ್ಟೆ ಒಳ್ಳೆಯ ಡಾಕ್ಟರು, ಏನೂ ತಪ್ಪು ತಿಳಿಯಬೇಡ.

* ಈ ಮಾತನ್ನು ಪಿ. ಲಂಕೇಶ್ ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಕತೆಯಿಂದ ಆಯ್ದುಕೊಳ್ಳಲಾಗಿದೆ

* ಈ ಮಾತನ್ನು ಡಾ. ತಿಮ್ಮಪ್ಪನವರು ಬಸಲಿಂಗನಿಗೆ ಹೇಳುತ್ತಾರೆ.

* ತನ್ನ ಎಡಗಣ್ಣಿನ ಚಿಕಿತ್ಸೆಯ ಸಂದರ್ಭ ಡಾ. ತಿಮ್ಮಪ್ಪ ಹೊಲೆಯರೆಂದು ತಿಳಿದ ಬಸಲಿಂಗ ಅವರನ್ನು ದ್ವೇಷಿಸತೊಡಗುತ್ತಾನೆ. ಕೆಲವು ಕಾಲದ ನಂತರ ಆತನ ಬಲಗಣ್ಣಿನಲ್ಲಿ ಸಮಸ್ಯೆ ಆರಂಭವಾದಾಗ ಉಲಿದೆಲ್ಲಾ ವೈದ್ಯರಲ್ಲಿ ಕಂಡರೂ ಫಲಕಾರಿಯಾಗದಿದದ್ದಾಗ ಕೊನೆಗೆ ಡಾ. ತಿಮ್ಮಪ್ಪನವರ ಬಳಿಗೆ ಉಡಾಫೆಯಿಂದ ಬರುತ್ತಾನೆ. ಆದರೆ ಡಾ. ತಿಮ್ಮಪ್ಪನವರಿಗೆ ಬಸಲಿಂಗನಲ್ಲಿ ಬದಲಾವಣೆಯಾಗಿ ಗಂಟಲು ದೊಡ್ಡದಾಗಿರುವುದು ತಿಳಿದು, ನಾನು ನಿನ್ನನ್ನು ಮುಟ್ಟಿದ್ದು ಒಬ್ಬ ವೈದ್ಯ ನಾಗಿ, ಆದರೆ ನಿನ್ನಂತಹ ಮುಗ್ಧನಲ್ಲಿಯೂ ನನ್ನ ಮುಟ್ಟುವಿಕೆ ಇಂತಹ ಬದಲಾವಣೆಯನ್ನು ಮಾಡಿದೆ ಎಂದು ಮುಂತಾಗಿ ಹೇಳಿ ಈ ಮೇಲಿನ ಮಾತನ್ನು

ನೋವಿನಿಂದ ಹೇಳುತ್ತಾರೆ.

ಸ್ವಾರಸ್ಯ: ಬಸಲಿಂಗನ ನಡವಳಿಕೆಯಿಂದ ನೋವಿಗೆ ಒಳಗಾದ ಡಾ. ತಿಮ್ಮಪ್ಪನವರು ಅವನ ನಂಬಿಕೆಯನ್ನು ಕೆಡಿಸಬಾರದೆಂಬ ದೃಷ್ಟಿಯಿಂದ ಅವನಿಗೆ ಸಲಹೆಯನ್ನು ಕೊಡುತ್ತಾರೆ.

೫. ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ.

* ಈ ಮಾತನ್ನು ಪಿ. ಲಂಕೇಶ್ ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಕತೆಯಿಂದ ಆಯ್ದುಕೊಳ್ಳಲಾಗಿದೆ.

* ಈ ಮಾತನ್ನು ಡಾ. ತಿಮ್ಮಪ್ಪನವರು ಬಸಲಿಂಗನಿಗೆ ಹೇಳುತ್ತಾರೆ.

* ಡಾ. ತಿಮ್ಮಪ್ಪ ಹೊಲೆಯರೆಂದು ತಿಳಿದ ಬಸಲಿಂಗ ಅವರನ್ನು ದ್ವೇಷಿಸ ತೊಡಗಿ ಟೀಕಿಸುತ್ತಿರುತ್ತಾನೆ. ಕೆಲವು ಸಮಯದ ನಂತರ ಬಲಗಣ್ಣಿನ ಸಮಸ್ಯೆ ಆರಂಭವಾದಗ ಉಳಿದೆಲ್ಲಾ ವೈದ್ಯರಲ್ಲಿ ಕಂಡರೂ ಫಲಕಾರಿಯಾಗದಿದ್ದಾಗ ಕೊನೆಗೆ ಡಾ. ತಿಮ್ಮಪ್ಪನವರ ಬಳಿಗೆ ಉಡಾಫೆಯಿಂದ ಬರುತ್ತಾನೆ. ಆದರೆ ಡಾ.ತಿಮ್ಮಪ್ಪ ನವರಿಗೆ ಬಸಲಿಂಗನಲ್ಲಿ ಬದಲಾವಣೆ ತಿಳಿದು, ನಾನು ನಿನ್ನನ್ನು ಮುಟ್ಟಿದ್ದು ಒಬ್ಬ ವೈದ್ಯನಾಗಿ, ಆದರೆ ನಿನ್ನಂತಹ ಮುಗ್ಧನಲ್ಲಿಯೂ ಕೂಡ ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ ಎಂದು ನೋವಿನಿಂದ ಹೇಳುತ್ತಾರೆ.

ಸ್ವಾರಸ್ಯ: ತಾನು ಹೊಲೆಯನೆಂಬ ಕಾರಣದಿಂದ ಬಸಲಿಂಗನಲ್ಲಾದ ಬದಲಾವಣೆಯಿಂದ ಡಾ. ತಿಮ್ಮಪ್ಪನವರಲ್ಲಿ ಉಂಟಾದ ದುಃಖವನ್ನು ಈ ಮಾತಿನಲ್ಲಿ ಗಮನಿಸ ಬಹುದು.

೬. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ.

* ಈ ಮಾತನ್ನು ಪಿ. ಲಂಕೇಶ್ ರವರು ಬರೆದಿರುವ 'ಮುಟ್ಟಿಸಿಕೊಂಡವನು' ಎಂಬ ಕತೆಯಿಂದ ಆಯ್ದುಕೊಳ್ಳಲಾಗಿದೆ.

* ಈ ಮಾತನ್ನು ಡಾ. ಚಂದ್ರಪ್ಪ ಬಸಲಿಂಗನಿಗೆ ಹೇಳುತ್ತಾನೆ.

* ಡಾ. ತಿಮ್ಮಪ್ಪ ಹೊಲೆಯರೆಂದು ತಿಳಿದ ಅವರನ್ನು ಟೀಕಿಸುತ್ತಿದ್ದ ಬಸಲಿಂಗನಿಗೆ ಬಲಗಣ್ಣಿನಲ್ಲಿ ಸಮಸ್ಯೆ ಆರಂಭವಾದಾಗ ಬೇರೆ ದಾರಿಯಿಲ್ಲದೆ ಡಾ. ತಿಮ್ಮಪ್ಪ ನವರ ಬಳಿಗೆ ಉಡಾಫೆಯಿಂದ ಬರುತ್ತಾನೆ. ಆದರೆ ಡಾ. ತಿಮ್ಮಪ್ಪನವರಿಗೆ ಬಸಲಿಂಗನಲ್ಲಿ ಆದ ಬದಲಾವಣೆ ತಿಳಿದು ಆತನಿಗೆ ಚಿಕಿತ್ಸೆ ನೀಡಲು ನಿರಾಕರಿಸಿ ಡಾ. ಚಂದ್ರಪ್ಪನವರ ಬಳಿ ಹೋಗುವಂತೆ ಸಲಹೆ ಕೊಡುತ್ತಾರೆ. ಆದರೆ ಡಾ. ಚಂದ್ರಪ್ಪ ಮಾತ್ರ ಡಾ. ತಿಮ್ಮಪ್ಪನವರನ್ನು ಹೊಗಳುತ್ತಾ ಅವರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ಈ ರೋಗ ಅವರ ವಲಯಕ್ಕೆ ಸೇರಿದ್ದು ಎಂದು ಹೇಳುತ್ತಾ ಈ ಮೇಲಿನ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ: ಡಾ. ತಿಮ್ಮಪ್ಪನವರ ಪ್ರತಿಭೆ ಹಾಗೂ ಸಾಮರ್ಥ್ಯವನ್ನು ಈ ಮಾತು ತಿಳಿಸುತ್ತದೆ.

ಆ. ಒಂದು ಅಂಕದ ಪ್ರಶ್ನೆಗಳು:

೧. ಬಸಲಿಂಗನ ಹೆಂಡತಿಯ ಹೆಸರೇನು?

ಬಸಲಿಂಗನ ಹೆಂಡತಿಯ ಹೆಸರು ಸಿದ್ಲಿಂಗಿ.

೨. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು?

ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಎಡಗಣ್ಣಿನಲ್ಲಿ ಆರಂಭವಾದ ನೋವು.

೩. ಬಸಲಿಂಗನಿಗೆ ಮೊದಲು ಯಾವ ಕಣ್ಣಿನಲ್ಲಿ ನೋವು ಆರಂಭವಾಯಿತು?

ಬಸಲಿಂಗನಿಗೆ ಮೊದಲು ಎಡಗಣ್ಣಿನಲ್ಲಿ ನೋವು ಆರಂಭವಾಯಿತು.

೪. 'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರೇನು?

'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರು ಡಾ. ತಿಮ್ಮಪ್ಪ.

೫. ಸರ್ಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಲ್ಲಿದ್ದ ಅಭಿಪ್ರಾಯವೇನು?

ಸರ್ಕಾರಿ ಆಸ್ಪತ್ರೆ ಅಂದರೆ ದಿಕ್ಕು ದಿವಾಳಿಯಿಲ್ಲದವರು ಹೋಗುವ ಜಾಗ ಎನ್ನುವುದು ಬಸಲಿಂಗನ ಅಭಿಪ್ರಾಯವಾಗಿತ್ತು.

೬. ಬಸಲಿಂಗನು ಡಾ. ತಿಮ್ಮಪ್ಪನಿಗೆ ಏನೆಂದು ಸುಳ್ಳು ಹೇಳಿದನು?

ತಾನು ತಲೆಗೆ ನೀರನ್ನು ಸೋಂಕಿಸಿಯೇ ಇಲ್ಲ ಎಂದು ಬಸಲಿಂಗ ಡಾ. ತಿಮ್ಮಪ್ಪನಿಗೆ ಸುಳ್ಳು ಹೇಳಿದನು.

೭. ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಯಾರು?

ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ರುದ್ರಪ್ಪ.

೮. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಯಾವ ಸ್ತರವನ್ನು ತಲುಪತೊಡಗಿತ್ತು.

ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಮಾನಸಿಕ ಸ್ತರವನ್ನು ತಲುಪತೊಡಗಿತ್ತು.

೯. ಡಾ. ತಿಮ್ಮಪ್ಪ ಬಸಲಿಂಗನಿಗೆ ಯಾವ ವೈದ್ಯರನ್ನು ಕಾಣಬೇಕೆಂದು ಸೂಚಿಸಿದರು?

ಡಾ. ತಿಮ್ಮಪ್ಪ ಬಸಲಿಂಗನಿಗೆ ಡಾ. ಚಂದ್ರಪ್ಪನವರನ್ನು ಕಾಣಬೇಕೆಂದು ಸೂಚಿಸಿದರು.

೧೦. ಕೊನೆಗೆ ಬಸಲಿಂಗ ಯಾವುದರಿಂದ ಮುಕ್ತನಾಗಿದ್ದ?

ಕೊನೆಗೆ ಬಸಲಿಂಗ ಸುಳ್ಳುಗಳಿಂದ ಮುಕ್ತನಾಗಿದ್ದ.

ಇ. ಎರಡು ಅಂಕಗಳ ಪ್ರಶ್ನೆಗಳು:

೧. ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಯಾಕೆ?

ಗೇಯುವುದನ್ನು ನಾಲ್ಕು ದಿನ ತಡ ಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಆದರೆ ಇರುವ ಎರಡು ಎತ್ತುಗಳಲ್ಲಿ ಒಂದು ಈಗಾಗಲೆ ಸೋಮಾರಿಯಾಗಿದ್ದರೆ, ಮತ್ತೊಂದು ತನ್ನ ಸಹೋದ್ಯೋಗಿಯಂತೆಯೇ ಆಗಿ ಬಿಡುವ ಲಕ್ಷಣಗಳು ಕಾಣಿಸುತ್ತಿದೆ. ಆದ್ದರಿಂದ ಎತ್ತುಗಳನ್ನು ಯಾರಿಗಾದರೂ ಸಾಟಿಯಲ್ಲಿ ಕೊಟ್ಟು ಹೊಸ

ಎತ್ತುಗಳನ್ನು ಹೊಂಚಿಕೊಳ್ಳಬೇಕು. ಜೊತೆಗೆ ಮಗುವಿಗೆ ಮೈಸರಿಯಿಲ್ಲದಿರುವುದರಿಂದ ಶಿವನೂರು ಸ್ವಾಮಿಗಳ ಬಳಿಗೆ ಹೋಗಬೇಕೆಂದು ಹೆಂಡ್ತಿ ಸಿದ್ಲಿಂಗಿ

ಹೇಳುತ್ತಿದ್ದಾಳೆ.ಆದ್ದರಿಂದ ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲವಾಗಿತ್ತು.

೨. ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

ಬಸಲಿಂಗನ ಮಗುವಿನ ಮೈಯಲ್ಲಿ ಸರಿಯಿಲ್ಲ. ಮಗುವಿನ ಕೆಮ್ಮು ಹೋಗುತ್ತಲೇ ಇಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಿದ್ದಾಳೆ.

೩. ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುದು ಗೌಣವಾಗಿ ಕಾಣತೊಡಗಿದವು?

ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಉಳದಿರುವ ನೆಲ, ತನ್ನ ಮಲಗುವ ಎತ್ತುಗಳನ್ನು ಸಾಟಿ ಮಾಡಬೇಕಾಗಿರುವುದು ಹಾಗು ಮಗುವಿನ ಕಾಯಿಲೆ ಗೌಣವಾಗಿ

ಕಾಣತೊಡಗಿದವು.

೪. ಕಣ್ಣನ್ನು ಪರೀಕ್ಷಿಸಿದ ಡಾ. ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು?

ಡಾ. ತಿಮ್ಮಪ್ಪ ಸೂಟಿಯಾದ ತಮ್ಮ ಬೆರಳುಗಳಿಂದ ಬಸಲಿಂಗನನ್ನು ಪರೀಕ್ಷಿಸಿ ಅವನ ಕಣ್ಣು ನೋವಿಗಿರುವ ಕಾರಣವನ್ನು ಹುಡುಕಿ, ನಿನ್ನ ಕಣ್ಣು ನೋವು ಸರಿಯಾಗುತ್ತದೆ.ಆದರೆ ಆಪರೇಷನ್ ಆಗಬೇಕು ಪರವಾಗಿಲ್ಲವೆ ಎಂದು ಕೇಳುತ್ತಾರೆ.

೫. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

ಬಸಲಿಂಗ ತನ್ನ ಕಣ್ಣು ನೋವಿಗೆ ಬೇರೆ ಯಾವ ವೈದ್ಯರಲ್ಲಿಯೂ ಸೂಕ್ತ ಚಿಕಿತ್ಸೆ ದೊರಕದಿದ್ದಾಗ ಡಾ. ತಿಮ್ಮಪ್ಪನವರ ಬಳಿ ಹೋಗಿ ಚಿಕಿತ್ಸೆ ಪಡೆದುಕೊಳ್ಳುತ್ತಾನೆ.ಆದರೆ ಬಸಲಿಂಗ ಮನೆಗೆ ಬಂದಾಗ ಆತನ ಮಡದಿ ಸಿದ್ಲಿಂಗಿಗೆ ಹೇಗೋ ಡಾ. ತಿಮ್ಮಪ್ಪನವರು ಹೊಲೆಯರೆಂಬುದು ಗೊತ್ತಾಗಿತ್ತು. ಇದರಿಂದಾಗಿ ಆಕೆ ದೊಡ್ಡ ರಾದ್ಧಾಂತ ಎಬ್ಬಿಸಿದಳು.

೬. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು?

ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಇದಕ್ಕೆ ಅಪರೇಷನ್ ಮಾಡಬೇಕಾದ ಅಗತ್ಯವಿರಲಿಲ್ಲ. ಆ ಡಾ. ತಿಮ್ಮಪ್ಪನಿಗೆ ಬುದ್ಧಿಯಿಲ್ಲ. ಅದಕ್ಕೆ ಆಪರೇಷನ್ ಮಾಡಿದ್ದಾರೆ ಎಂದು ಪ್ರತಿಕ್ರಿಯಿಸಿದರು.

೭. ಡಾ. ಚಂದ್ರಪ್ಪ ಬಸಲಿಂಗನಿಗೆ ಡಾ. ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

ಡಾ. ತಿಮ್ಮಪ್ಪನವರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ನಮ್ಮ ವೈದ್ಯಲೋಕ ಕಂಡಂತಹ ಅತ್ಯಂತ ಪ್ರಾಮಾಣಿಕ ಹಾಗೂ ಪ್ರತಿಭಾವಂತ ವೈದ್ಯರು ಡಾ. ತಿಮ್ಮಪ್ಪ. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತದೆ ಎಂದು ಡಾ. ತಿಮ್ಮಪ್ಪನ ಬಗ್ಗೆ ಡಾ. ಚಂದ್ರಪ್ಪ ಹೇಳುತ್ತಾರೆ.

೮. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?

ತನ್ನ ಉಡಾಫೆ, ಸುಳ್ಳು, ಜಾತಿ, ಮಠದ ಗುರು–ಯಾರು ತನ್ನ ಕಣ್ಣು ಉಳಿಸುವುದಿಲ್ಲ ಎಂಬುದು ಕೊನೆಯಲ್ಲಿ ಬಸಲಿಂಗನಿಗೆ ನಿಶ್ಚಿತವಾಗತೊಡಗಿತ್ತು.

ಈ. ನಾಲ್ಕು ಅಂಕದ ಪ್ರಶ್ನೆಗಳು.

೧. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲವಾಗಿತ್ತು. ಗೇಯುವುದನ್ನು ನಾಲ್ಕು ದಿನ ತಡ ಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಆದರೆ ಇರುವ ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿಬಿಡುತ್ತದೆ. ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿ ಬಿಡುವ ಲಕ್ಷಣಗಳು ಕಾಣಿಸುತ್ತಿದೆ. ಆದ್ದರಿಂದ ಎತ್ತುಗಳನ್ನು ಯಾರಿಗಾದರೂ ಸಾಟಿಯಲ್ಲಿ ಕೊಟ್ಟು ಹೊಸ ಎತ್ತುಗಳನ್ನು ಹೊಂಚಿಕೊಳ್ಳಬೇಕು, ಆದರೆ ತನ್ನ ಮಲಗುವ ಎತ್ತುಗಳನ್ನು ಸಾಟಿ ಮಾಡಲು ಹೇಳಬೇಕಾದ ಸುಳ್ಳು ಅವನ ತಲೆ ತಿನ್ನತೊಡಗಿತು. ಸುಳ್ಳು ಹೇಳಲು ಬೇಕಾದ ಛಾತಿ, ಮಾತುಗಾರಿಕೆ ಅವನಲ್ಲಿರಲಿಲ್ಲ. ಎತ್ತುಗಳ ಬಗ್ಗೆ ಹೇಳಲು ಒಳ್ಳೆಯದನ್ನು ಲೆಕ್ಕ ಹಾಕಿದಂತೆಲ್ಲ ತಲೆ ಬಿಸಿಯಾಗುತ್ತಿತ್ತು. ಜೊತೆಗೆ ತನ್ನ ಮಗುವಿಗೆ ಮೈಯಲ್ಲಿ ಸರಿಯಿಲ್ಲ. ಮಗುವಿನ ಕೆಮ್ಮು ಹೋಗುತ್ತಲೇ ಇಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕೆಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಿದ್ದಾಳೆ. ಇದರೊಂದಿಗೆ ಬಸಲಿಂಗನ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು ಮಾತ್ರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಈ ಎಲ್ಲಾ ಸಮಸ್ಯೆಗಳನ್ನು ಬಸಲಿಂಗ ಅನುಭವಿಸುತ್ತಿದ್ದ.

೨. ಕಣ್ಣುನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

ಬಸಲಿಂಗನ ಎಡಗಣ್ಣಿನಲ್ಲಿ ಕಾಣಿಸಿಕೊಂಡ ನೋವು ಮಾತ್ರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ನೋವಿನೊಂದಿಗೆ ಸ್ವಲ್ಪ ದೃಷ್ಟಿಯೂ ಮದವಾಗುತ್ತಿದ್ದಂತೆ ನಗರದ ತನ್ನ ಎಂದಿನ ವೈದ್ಯರ ಬಳಿ ಚಿಕಿತ್ಸೆಗೆ ಹೋಗುತ್ತಾನೆ. ವೈದ್ಯರು ನೋವಿನ ವಿವರಗಳನ್ನೆಲ್ಲ ಕೇಳಿ ರೆಪ್ಪೆ ಅಗಲಿಸಿ ಪರೀಕ್ಷಿಸಿದರು. ಕಾರಣ ಅವರಿಗೂ ಅರ್ಥವಾಗದಿದ್ದರೂ ಬಸಲಿಂಗನಿಗೆ ಧೈರ್ಯ ತುಂಬಲು ಒಳ್ಳೊಳ್ಳೆಯ ಮಾತನಾಡಿದರು. ತಮ್ಮ ವೈದ್ಯಕೀಯ ಪವಾಡಗಳ ಬಗ್ಗೆ ವಿವರಿಸಿ, ಹಚ್ಚಿಕೊಳ್ಳಲು ಒಂದು ಲೇಹ್ಯವನ್ನು ಕೊಡುತ್ತಾರೆ. ಇದರಿಂದ ಸ್ವಲ್ಪ ಮಟ್ಟಿಗೆ ಸಮಧಾನಗೊಂಡ ಬಸಲಿಂಗ ಹಲವು ದಿನಗಳ ಕಾಲ ವೈದ್ಯರು ಹೇಳಿದಂತೆ ಬಟ್ಟೆಯ ಕಾವು ಉಪ್ಪಿನ ಕಾವು ಕೊಟ್ಟುಕೊಂಡ. ಆದರೆ ಕಣ್ಣಿನ ನೋವು ಹಾಗೂ ಮಂದಸ್ಥಿತಿ ಕಡಿಮೆಯಾಗಲಿಲ್ಲ.

೩. ಬಸಲಿಂಗ ಡಾ. ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದಿರಲು ಕಾರಣವೇನು?

ಬಸಲಿಂಗನ ಕಣ್ಣು ನೋವಿಗೆ ಕಾರಣವನ್ನು ಪತ್ತೆಹಚ್ಚಿದ ಡಾ. ತಿಮ್ಮಪ್ಪ ಅವನಿಗೆ ಆಪರೇಷನ್ ಮಾಡಿ, ಕಣ್ಣಿಗೆ ನೀರು ಸೋಂಕಿಸಬಾರದೆಂಬ ಸೂಚನೆಯನ್ನು

ಕೊಡುತ್ತಾರೆ. ಆದರೆ ಬಸಲಿಂಗ ಮನೆಗೆ ಬಂದಾಗ ಆತನ ಹೆಂಡತಿ ಸಿದ್ಲಿಂಗಿಗೆ ಡಾ. ತಿಮ್ಮಪ್ಪ ಹೊಲೆಯರೆಂಬ ವಿಚಾರ ತಿಳಿದು ದೊಡ್ಡ ರಾದ್ಧಾಂತವನ್ನೆ ಮಾಡುತ್ತಾಳೆ. ಡಾ.ತಿಮ್ಮಪ್ಪನವರು ಹೊಲೆಯರೆಂಬ ವಿಚಾರ ತಿಳಿದ ಬಸಲಿಂಗನಿಗೆ ಅವರ ಬಗ್ಗೆಯಿದ್ದ ಉತ್ತಮ ಭಾವನೆಗಳೆಲ್ಲ ಮಾಯವಾಗುತ್ತದೆ. ತನ್ನ ಹಾಗೂ ಡಾ. ತಿಮ್ಮಪ್ಪ ನಡುವಿನ ಸಂಬಂಧ ಬೇರೆ ಏರಕದಲ್ಲಿ ಹೊಯ್ದಂತೆ ಆತನಿಗೆ ಕಾಣಿಸುತ್ತದೆ. ತನ್ನನ್ನು ಮುಟ್ಟುವ ಮುನ್ನ ಅವರು ತಮ್ಮ ಜಾತಿಯ ಬಗ್ಗೆ ಒಂದು ಮಾತು ಹೇಳಿದ್ದರೆ ಒಳ್ಳೆಯದಿತ್ತು ಎಂದು ಅನಿಸುತ್ತದೆ. ಹೊಲೆಯಾರಾದ ಡಾ. ತಿಮ್ಮಪ್ಪ ತನ್ನನ್ನು ಮುಟ್ಟಿದರಿಂದ ತನ್ನ ಆಳ್ತನದಲ್ಲಿ ಏನೋ ಕಡಿಮೆಯಾದಂತೆ ಆತನಿಗೆ ಅನ್ನಿಸಿ ನೊಂದುಕೊಳ್ಳುತ್ತಾನೆ. ಡಾ. ತಿಮ್ಮಪ್ಪ ತನ್ನನ್ನು ಮುಟ್ಟಿದ ವಿಚಾರವನ್ನು ಯಾರ ಬಳಿಯೂ ಹೇಳಬಾರದೆಂದು ಸಿದ್ಲಿಂಗಿ ಹಾಗೂ ಬಸಲಿಂಗ ತೀರ್ಮಾನಿಸುತ್ತಾರೆ. ಆದರೆ ಆಗಿರುವ ಸೂತಕವನ್ನು ಪರಿಹರಿಸಲು ಮೈತೊಳೆದುಕೊಳ್ಳಬೇಕೆಂದು ಯೋಚಿಸಿ, ಡಾ. ತಿಮ್ಮಪ್ಪನವರ ಸೂಚನೆಯನ್ನು ಧಿಕ್ಕರಿಸಿ ಸಿದ್ಲಿಂಗಿ ಆತನಿಗೆ ಸ್ನಾನ ಮಾಡಿಸುತ್ತಾಳೆ.

೪. ಬಸಲಿಂಗನಿಗೆ ಸಿಟ್ಟು ಬರಲು ಕಾರಣವೇನು? ಅದನ್ನು ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?

ಡಾ. ತಿಮ್ಮಪ್ಪನವರ ಸೂಚನೆಯನ್ನು ಪಾಲಿಸದಿರುವುದರಿಂದ ಬಸಲಿಂಗನಿಗೆ ಕಣ್ಣುನೋವು ಮತ್ತೆ ಪ್ರಾರಂಭವಾಗುತ್ತದೆ. ಪ್ರಾರಂಭದಲ್ಲಿ ಉಳಿದ ಎಲ್ಲ ವೈದ್ಯರಿಗೆ ತೋರಿಸಿ ಪ್ರಯೋಜನವಾಗದಿದ್ದಾಗ ಡಾ. ತಿಮ್ಮಪ್ಪನವರ ಬಳಿ ಮತ್ತೆ ಬರುತ್ತಾನೆ. ಆದದ್ದನೆಲ್ಲ ಅವರಲ್ಲಿ ಹೇಳಿದ ಬಸಲಿಂಗ ನಿಮ್ಮ ಮಾತನ್ನು ಇನ್ನು ಮೀರುವುದಿಲ್ಲ. ಇನ್ನೊಂದು ಸಲ ಆಪರೇಷನ್ ಮಾಡಿ ಎಂದು ಕೇಳಿಕೊಳ್ಳುತ್ತಾನೆ. ಆದರೆ ಡಾ. ತಿಮ್ಮಪ್ಪನವರು ಇನ್ನೊಂದು ಆಪರೇಷನ್ ನಿಂದ ಪ್ರಯೋಜನವಿಲ್ಲ ಎಂದು ಹೇಳಿ ಕೆಲವು ಔಷದಗಳನ್ನು ಕೊಟ್ಟು ತಪ್ಪದೆ ಹಚ್ಚಿಕೊಳ್ಳವಂತೆ ಸೂಚಿಸುತ್ತಾರೆ. ತನ್ನ ಜಾತಿಯನ್ನು ಕೆಡಿಸಿದ ಡಾ. ತಿಮ್ಮಪ್ಪ ತನ್ನ ಬಗ್ಗೆ ನಿರ್ಲಕ್ಷ ಬೆಳೆಸಿಕೊಳ್ಳುತ್ತಿದ್ದಾರೆ ಎಂದು ಆತನಿಗೆ ಅನ್ನಿಸುತ್ತದೆ. ತನ್ನ ಕಣ್ಣು ಹೋಗಲು ಡಾ. ತಿಮ್ಮಪ್ಪನವರೆ ಕಾರಣವೆಂದು ತಿಳಿದ ಬಸಲಿಂಗನಿಗೆ ಅವರ ಮೇಲೆ ಸಿಟ್ಟು ಬರುತ್ತದೆ. ಇದರಿಂದಾಗಿ ಆತ ಆಗಿರುವ ವಿಷಯಗಳನ್ನು ತಾನು ಬಲ್ಲವರೊಂದಿಗೆ ತಿರುಚಿ ಹೇಳಿಕೊಂಡು ಡಾ. ತಿಮ್ಮಪ್ಪನವರನ್ನು ಟೀಕಿಸುವ ಮೂಲಕ ಅವರ ಮೇಲಿನ ಸಿಟ್ಟನ್ನು ವ್ಯಕ್ತಪಡಿಸುತ್ತಾನೆ.

೫. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?

ಡಾ. ತಿಮ್ಮಪ್ಪನವರನ್ನು ಹೊರತುಪಡಿಸಿ ಉಳಿದ ಯಾವ ವೈದ್ಯರಿಂದಲೂ ತನ್ನ ಕಣ್ಣಿನ ಸಮಸ್ಯೆ ಪರಿಹಾರವಾಗುವುದಿಲ್ಲ ಎನ್ನವುದು ಅರಿವಾಗುತ್ತಲೆ ಬಸಲಿಂಗ ಕಂಗಲಾಗುತ್ತಾನೆ. ತನ್ನ ಕಣ್ಣನ್ನು ಉಳಿಸುವ ಸಲುವಾಗಿ ಚಿಕಿತ್ಸೆಗೆ ಡಾ. ತಿಮ್ಮಪ್ಪನವರ ಬಳಿಗೆ ಹೋಗುವ ನಿರ್ಧಾರವನ್ನು ಮಾಡುತ್ತಾನೆ. ಉಳಿದಿರುವ ಬಲಗಣ್ಣಿನ ನೋವು ಭೀಕರವಾಗಿತ್ತು. ಬರಬರುತ್ತ ದಿನಗಳೆದಂತೆ ದೃಷ್ಠಿ ಮಂದವಾಗುತ್ತಿತ್ತು.ತನ್ನ ಉಡಾಫೆ, ಸುಳ್ಳು, ಜಾತಿ, ಮಠದ ಗುರು ಯಾರು ತನ್ನ ಕಣ್ಣು ಉಳಿಸುವುದಿಲ್ಲ ಎಂಬುವುದು ಆತನಿಗೆ ನಿಶ್ಚಿತವಾಗಿತ್ತು. ನೋವು ದೈಹಿಕ ನೋವನ್ನು ಮೀರಿದ ನೋವು ಆತನನ್ನು ತುಂಬತೊಡಗಿತ್ತು. ಡಾ. ತಿಮ್ಮಪ್ಪನವರ ಮಿಂಚಿನಂತಹ ಬೆರಳು, ಪ್ರೀತಿ ತುಂಬಿದ ಮುಖ, ತನ್ನ ಹೊಲ, ಎತ್ತು, ಗದ್ದೆ ಮುಂತಾದವು ನೆನಪಾಗಿ ಆತ ಡಾ. ತಿಮ್ಮಪ್ಪನವರ ಬಳಿ ಚಿಕಿತ್ಸೆಗೆ ಹೋಗಲು ನಿರ್ಧರಿಸುತ್ತಾನೆ.

ಭಾಷಾಭ್ಯಾಸ:

ತದ್ಭವ ರೂಪಗಳು:

ದೃಷ್ಟಿ =ದಿಟ್ಟಿ

ಕ್ಷಣ =ಚಣ

**************************************************************************
*